ರವಾನೆ ಸಂಖ್ಯೆ: 2211/2023 ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರವರ
ಕಛೇರಿ, ಚಿಕ್ಕಮಗಳೂರು, ದಿನಾಂಕ: 15.03.2023.

## ಟೆಂಡರ್ ಪ್ರಕಟಣೆ

ವಿಷಯ:- ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಕೇಂದ್ರ ಕಡತ ವಿಭಾಗದಲ್ಲಿ ಹರಿದು ಚೂರು ಮಾಡಿ ಸಂಗ್ರಹವಾಗಿರುವ ಕಾಗದ ಪತ್ರಗಳ ವಿಲೇವಾರಿಗೆ ಮೊಹರು ಮಾಡಿದ ಟೆಂಡರುಗಳನ್ನು ಆಹ್ವಾನಿಸುವ ಬಗ್ಗೆ.

...............

ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಕೇಂದ್ರ ಕಡತ ವಿಭಾಗದಲ್ಲಿ ಸಂಗ್ರಹವಾಗಿರುವ ಹರಿದು ಚೂರು ಮಾಡಿರುವ ಕಾಗದ ಪತ್ರಗಳ ಸೂಕ್ತ ವಿಲೇವಾರಿಗೆ ಸ್ಪರ್ಧಾತ್ಮಕ ದರಗಳನ್ನು ಆಹ್ವಾನಿಸಿ, ಅಧಿಕೃತ ಕಾಗದ ಮಾರಾಟಗಾರರಿಂದ ಮೊಹರು ಮಾಡಿದ ಟೆಂಡರುಗಳನ್ನು ಈ ಕೆಳಗೆ ಕಾಣಿಸಿರುವ ನಿಬಂಧನೆಗೆ ಒಳಪಡಿಸಿ ಕರೆಯಲಾಗಿದೆ.

1. ಆಸಕ್ತಿ ಇರುವ ಅಧಿಕೃತ ಹಳೆಯ ಕಾಗದದ ಮಾರಾಟಗಾರರು, ಚೂರು ಮಾಡಿರುವ ಕಾಗದಗಳಿಗೆ ಕೆ.ಜಿ./ಕ್ವಿಂಟಾಲ್‌ಗೆ ದರವನ್ನು ನಮೂದಿಸಿ (ಮಾರಾಟ ತೆರಿಗೆಯನ್ನು ಹೊರತುಪಡಿಸಿ) ದಿನಾಂಕ: 18.04.2023 ರಂದು ಮಧ್ಯಾಹ್ನ 2-00 ಗಂಟೆಯ ಒಳಗೆ ಟೆಂಡರನ್ನು ಸಲ್ಲಿಸತಕ್ಕದ್ದು, ಆ ನಂತರ ಬರುವ ಟೆಂಡರುಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

2. ಭದ್ರತಾ ಠೇವಣಿ ಮೊತ್ತ ರೂ.3,000-00 ಗಳನ್ನು (ಮೂರು ಸಾವಿರ ರೂಪಾಯಿಗಳು ಮಾತ್ರ) ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ನಗದು ರೂಪದಲ್ಲಿ ಪಾವತಿಸಬೇಕು. ಮನಿ ಆರ್ಡರ್ ಅಥವಾ ಡಿಮಾಂಡ್ ಡ್ರಾಫ್ಟ್ ಮೂಲಕ ಕಳುಹಿಸಲಾಗುವ ಠೇವಣಿ ಹಣವನ್ನು ಪುರಸ್ಕರಿಸಲಾಗುವುದಿಲ್ಲ.

3. ಟೆಂಡರುಗಳನ್ನು ಸೀಲು ಮಾಡಿದ ಲಕೋಟೆಯಲ್ಲಿಟ್ಟು, ಭದ್ರತಾ ಠೇವಣಿ ಕಟ್ಟಿದ ಬಗ್ಗೆ ರಶೀದಿಯ ಜೆರಾಕ್ಸ್ ಪ್ರತಿಯನ್ನು ಲಗತ್ತಿಸಿ ಈ ಕಛೇರಿಗೆ ಸದರಿ ದಿನಾಂಕದೊಳಗೆ ಸಲ್ಲಿಸಬೇಕು.

4. ಟೆಂಡರುಗಳನ್ನು ದಿನಾಂಕ: 18.04.2023 ರಂದು ಸಾಯಂಕಾಲ 4-00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಸಮ್ಮುಖದಲ್ಲಿ ಹಾಜರಿರುವ ಟೆಂಡರುದಾರರ ಎದುರಿನಲ್ಲಿ ತೆರೆಯಲಾಗುವುದು.

5. ಸೂಕ್ತ ಬೆಲೆ ಸಿಗದಿದ್ದ ಪಕ್ಷದಲ್ಲಿ ಟೆಂಡರನ್ನು ರದ್ದುಪಡಿಸಲಾಗುವುದು.

6. ಹರಿದು ಚೂರು ಮಾಡಿರುವ ಕಾಗದಗಳನ್ನು ಜಿಲ್ಲಾ ನ್ಯಾಯಾಲಯದ ಕೇಂದ್ರ ಕಡತ ಕೊಠಡಿ ವಿಭಾಗದಲ್ಲಿ ಸಂಗ್ರಹಿಸಿ ಇಡಲಾಗಿದ್ದು, ಕಛೇರಿಯ ಕೆಲಸದ ದಿನಗಳಲ್ಲಿ ಅದನ್ನು ಪರೀಕ್ಷಿಸಬಹುದು.

7. ಯಶಸ್ವಿಯಾದ ಟೆಂಡರುದಾರರಿಗೆ ತಿಳುವಳಿಕೆ ಕೊಡಲಾಗುವುದು. ಆ ರೀತಿ ತಿಳುವಳಿಕೆ ಪತ್ರ ತಲುಪಿದ ಏಳು ದಿನಗಳ ಒಳಗೆ ಕಛೇರಿಯಲ್ಲಿ ಪೂರ್ತಿ ಹಣವನ್ನು ಜಮಾ ಮಾಡಿ ಕೇಂದ್ರ ಕಡತ

ವಿಭಾಗದಿಂದ ಹರಿದು ಚೂರಾಗಿಸಿದ ಕಾಗದಗಳನ್ನು ತೆಗೆದುಕೊಂಡು ಹೋಗತಕ್ಕದ್ದು. ಆ ರೀತಿ ಏಳು ದಿನಗಳೊಳಗೆ ಬಂದು ತೆಗೆದುಕೊಂಡು ಹೋಗದಿದ್ದಲ್ಲಿ ಅವರ ಭದ್ರತಾ ಠೇವಣಿ ಹಣವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

8. ಏಳು ದಿನಗಳೊಳಗಾಗಿ ಬಂದು ಹಣ ಪಾವತಿಸಿ ಹಳೆಯ ಪೇಪರ್ ತೆಗೆದುಕೊಂಡು ಹೋಗದೆ ಇದ್ದ ಪಕ್ಷದಲ್ಲಿ ಅಂತಹ, ತಪ್ಪಿದ (ಡಿಫಾಲ್ಟ್ ಆದ) ನಂತರದ ಅತಿ ಹೆಚ್ಚಿನ ಮೊತ್ತ ನಮೂದಿಸಿರುವ ಟೆಂಡರ್‌ದಾರರನ್ನು ಯಶಸ್ವಿ ಟೆಂಡರುದಾರರೆಂದು ಪರಿಗಣಿಸಲಾಗುವುದು ಹಾಗೂ ಇದಕ್ಕೂ ಮೊದಲು ಆಯ್ಕೆಯಾಗಿ ಏಳು ದಿನಗಳೊಳಗಾಗಿ ಹಣ ಪಾವತಿ ಮಾಡಲು ತಪ್ಪಿದ ಈ ಮೊದಲಿನ ಟೆಂಡರುದಾರರು ಹಾಗೂ ನಂತರದ ಟೆಂಡರುದಾರರ ಮಧ್ಯೆ ಉಂಟಾಗುವ (ಕಡಿಮೆ ಬೀಳುವ) ವ್ಯತ್ಯಾಸವನ್ನು ಸರ್ಕಾರಕ್ಕೆ ಉಂಟಾಗುವ ನಷ್ಟವೆಂದು ಪರಿಗಣಿಸಿ, ವ್ಯತ್ಯಾಸದ ಹಣವನ್ನು (ಪ್ರತಿ ಕೆ.ಜಿ.ಗೆ ಲೆಕ್ಕ ಹಾಕಿ) ತಪ್ಪಿದ (ಡಿಫಾಲ್ಟ್ ಆದ) ಟೆಂಡರ್‌ದಾರರಿಂದ ವ್ಯತ್ಯಾಸದ ಹಣವನ್ನು ವಸೂಲು ಮಾಡಲಾಗುವುದು.

9. ಯಶಸ್ವಿಯಾಗದ ಟೆಂಡರುದಾರರುಗಳಿಗೆ ಭದ್ರತಾ ಠೇವಣಿಯ ಹಣವನ್ನು ಹಿಂದಿರುಗಿಸಲಾಗುವುದು.

10. ಟೆಂಡರುಗಳನ್ನು ಸ್ವೀಕರಿಸುವ, ಅಂಗೀಕರಿಸುವ ಅಥವಾ ತಿರಸ್ಕರಿಸುವ ಯಾವುದೇ ಹಕ್ಕನ್ನು ಈ ಕೆಳಕಂಡ ಸಹಿದಾರರು ಹೊಂದಿರುತ್ತಾರೆ.

(ಶುಭ ಗೌಡರ್)
PRL. DISTRICT & SESSIONS JUDGE
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಚಿಕ್ಕಮಗಳೂರು.